(ಸಾಕ್ಷಿಯನ್ನು ದಿನಾಂಕಃ  ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು. )

**ಪಾಟೀ ಸವಾಲುಃ ಪ್ರತಿವಾದಿ 8 ರವರ ಪರವಾಗಿ ವಕೀಲರುಃ ಶ್ರೀ  ಹೆಚ್ ಆರ್ ರವರಿಂದ**

ನಾನು ಎಸ್ ಎಸ್ ಎಲ್ ಸಿ ವರೆಗೆ ವಿದ್ಯಾಭ್ಯಾಸವನ್ನು ಮಾಡಿದ್ದೇನೆ.  ನಮ್ಮ ತಂದೆಯವರು ತೀರಿಕೊಂಡು ಸುಮಾರು 2 ವರ್ಷಗಳಾಗಿವೆ.  ನಮ್ಮ ದೊಡ್ಡಪ್ಪ ತೀರಿಕೊಂಡು ಸುಮಾರು 3 ವರ್ಷಗಳಾಗಿವೆ.  ಪ್ರತಿವಾದಿ 3, 5 ಮತ್ತು 7 ರವರಿಗೆ ಸುಮಾರು 20 ವರ್ಷಗಳ ಹಿಂದೆ ಮದುವೆಯಾಗಿದೆಯೆಂದರೆ ಸರಿ.

ಮದುವೆಯಾದ ನಂತರ ಅವರು ತಮ್ಮ ಗಂಡಂದಿರ ಮನೆಯಲ್ಲಿ ವಾಸವಾಗಿದ್ದಾರೆಂದರೆ ಸರಿ. ನೀವು ಮತ್ತು ಪ್ರತಿವಾದಿಗಳು ಈಗ ಬೇರೆ ಬೇರೆಯಾಗಿ ವಾಸಿಸುತ್ತಿದ್ದೀರಿ ಎಂದರೆ ಸರಿ. ಸುಮಾರು 39 ವರ್ಷಗಳಿಂದ ಬೇರೆ ಬೇರೆಯಾಗಿ ವಾಸವಾಗಿದ್ದೇವೆ. ದಾವಾ ಆಸ್ತಿಗಳೆಲ್ಲವನ್ನೂ ಲಿಂಗಪ್ಪರವರ ಹೆಸರಿನಲ್ಲಿದ್ದ ಆಸ್ತಿಗಳು ಪ್ರತಿವಾದಿ 1 ಮತ್ತು 2 ರವರ ಹೆಸರಿಗೆ ವರ್ಗಾವಣೆಯಾಗಿವೆಯೆಂದರೆ ಸಾಕ್ಷಿ ನಮಗೆ ಗೊತ್ತಿಲ್ಲದಂತೆ ವರ್ಗಾವಣೆಯಾಗಿವೆಯೆಂದು ನುಡಿಯುತ್ತಾರೆ. ನಿಮಗೂ ಮತ್ತು ಪ್ರತಿವಾದಿಗಳಿಗೆ ಪ್ರತ್ಯೇಕವಾಗಿ ಪಡಿತರ ಚೀಟಿಗಳು ಬರುತ್ತಿವೆಯೆಂದರೆ ಸರಿ. ನಾವು ವಾಸವಾಗಿರುವ ಮನೆಯ ಖಾತೆ ನಂಬರ್ ನನಗೆ ಗೊತ್ತಿಲ್ಲ. ನಾನು ದಾವೆಯನ್ನು ಹಾಕಿರುವ ಆಸ್ತಿಗಳ ಸರ್ವೇ ನಂಬರ್ ವಿಸ್ತೀರ್ಣ ಮತ್ತು ಚೆಕ್ಕುಬಂದಿ ನನಗೆ ಗೊತ್ತಿಲ್ಲ. ನೀವು ವಾಸವಾಗಿರುವ ಮನೆಯನ್ನು ಈ ದಾವೆಯಲ್ಲಿ ಸೇರಿಸಿದ್ದೀರಾ ಎಂದರೆ ಸಾಕ್ಷಿ ಸದರೀ ಮನೆಯನ್ನು ನಮ್ಮ ತಂದೆಯವರೇ ಖರೀದಿ ಮಾಡಿದ್ದರು ಆ ದ್ದರಿಂದ ಅದನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದು ನುಡಿಯುತ್ತಾರೆ. ದಾವಾ ಆಸ್ತಿ ನಂ. 8 ಪ್ರತಿವಾದಿ 1 ಮತ್ತು 2 ರವರ ಹೆಸರಿನಲ್ಲಿ ಖಾತೆ ಇತ್ತು ಎಂದರೆ ಸರಿ. ಸದರೀ ಜಮೀನಿನಲ್ಲಿ ಅವರೇ ಸ್ವಾಧೀನ ಮತ್ತು ಅನುಭವದಲ್ಲಿದ್ದರು ಎಂದರೆ ಸರಿ. ನಿಮ್ಮ ಕುಟುಂಬದ ಆಸ್ತಿಗಳನ್ನು ಸುಮಾರು 30 ವರ್ಷಗಳ ಹಿಂದೆಯೇ ವಿಭಾಗ ಮಾಡಿಕೊಂಡಿದ್ದರು ಎಂದರೆ ಸರಿಯಲ್ಲ. ಸದರೀ ವಿಭಾಗದ ಪ್ರಕಾರ ನೀವು ಮತ್ತು ಪ್ರತಿವಾದಿಗಳು ನಿಮ್ಮ ಭಾಗಕ್ಕೆ ಬಂದ ಆಸ್ತಿಗಳಲ್ಲಿ ನೀವು ಮತ್ತು ಸ್ವಾಧೀನ ಮತ್ತು ಅನುಭವದಲ್ಲಿದ್ದೀರಿ ಎಂದರೆ ಸರಿಯಲ್ಲ. ದಾವಾ ಆಸ್ತಿ ನಂ.8 ರ ಆಸ್ತಿಯನ್ನು ಪ್ರತಿವಾದಿ 1 ಮತ್ತು 2 ರವರು ಮತ್ತು ಪ್ರತಿವಾದಿ 1 ರವರ ಹೆಂಡತಿ ಬಾನುಮತಿರವರು ಅವರ ಕುಟುಂಬದ ಅವಶ್ಯಕತೆಗಳಿಗಾಗಿ ಪ್ರತಿವಾದಿ 8 ರವರಿಗೆ ಮಾರಾಟ ಮಾಡಿದ್ದಾರೆಂದರೆ ಸಾಕ್ಷಿ ಕಾನೂನು ಬಾಹಿರವಾಗಿ ಮಾರಾಟ ಮಾಡಿರುತ್ತಾರೆಂದು ನುಡಿಯುತ್ತಾರೆ. ಸದರೀ ಕ್ರಯಪತ್ರದಂತೆ ಪ್ರತಿವಾದಿ 8 ರವರ ಹೆಸರಿಗೆ ಎಂ ಆರ್ ನಂ 25/2020-21 ರಂತೆ ಖಾತೆ ವರ್ಗಾವಣೆ ಯಾಗಿರುತ್ತದೆಯೆಂದರೆ ಸಾಕ್ಷಿ ನಾವು ಅದಕ್ಕಿಂತ ಮೊದಲೇ ಈ ದಾವೆಯನ್ನು ಹಾಕಿದ್ದೇವು ಎಂದು ನುಡಿಯುತ್ತಾರೆ. ಈಗ ದಾವಾ ಆಸ್ತಿ ನಂ 8 ರಲ್ಲಿ ಪ್ರತಿವಾದಿ 8 ರವರು ಸ್ವಾಧೀನದಲ್ಲಿದ್ದಾರೆಂದರೆ ಸರಿ. ಪ್ರತಿವಾದಿ 3 ರಿಂದ 7 ರವರು ಪ್ರತಿವಾದಿ 1 ಮತ್ತು 2 ರವರು ಬರೆದುಕೊಟ್ಟಿರುವ ಕ್ರಯಪತ್ರಕ್ಕೆ ಒಪ್ಪಿಗೆ ಪತ್ರವನ್ನೂ ಕೂಡ ಬರೆದುಕೊಟ್ಟಿರುತ್ತಾರೆ, ಸಾಕ್ಷಿ ಆ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನೀವು ಮತ್ತು ಪ್ರತಿವಾದಿಗಳು ಸುಮಾರು 30. ವರ್ಷಗಳ ಹಿಂದೆ ವಿಭಾಗವಾಗಿದ್ದರೂ

ಕೂಡ ಆಗಿಲ್ಲ ಎಂದು ಸುಳ್ಳು ದಾವೆಯನ್ನು ಹೂಡಿದ್ದೀರಿ ಎಂದರೆ ಸರಿಯಲ್ಲ. ನಿಮ್ಮ ಮತ್ತು ಪ್ರತಿವಾದಿಗಳ ನಡುವೆ ಯಾವುದೇ ಒಟ್ಟು ಕುಟುಂಬ ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿ ನಂ 8 ಲಿಂಗಪ್ಪರವರ ಭಾಗಕ್ಕೆ ಬಂದಿತ್ತು. ಸದರೀ ಆಸ್ತಿಯನ್ನು ಪ್ರತಿವಾದಿ 1 ಮತ್ತು 2 ರವರು ಪ್ರತಿವಾದಿ 8 ರವರಿಗೆ ಮಾರಾಟ ಮಾಡಿರುತ್ತಾರೆಂದರೆ ಸಾಕ್ಷಿ ಅದರಲ್ಲಿ ನಮಗೆ ಭಾಗ ಬರಬೇಕಾಗಿತ್ತು ಎಂದು ನುಡಿಯುತ್ತಾರೆ. ಸದರೀ ಆಸ್ತಿಯನ್ನು ಪ್ರತಿವಾದಿ 8 ರವರಿಗೆ ಮಾರಾಟ ಮಾಡಿರುವುದರಿಂದ ಆ ಆಸ್ತಿಯ ಮೇಲೆ ನಿಮಗೆ ಯಾವುದೇ ಹಕ್ಕು ಮತ್ತು ಅಧಿಕಾರ ಇಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ 8 ರವರು ದಾವಾ ಐಟಂ ನಂ 8 ನ್ನು ಖರೀದಿ ಮಾಡಿದ ನಂತರ ಅದನ್ನು ತುಂಬಾ ಅಭಿವೃದ್ಧಿ ಪಡಿಸಿದ್ದಾರೆಂದರೆ ಸರಿಯಲ್ಲ. ಸದರೀ ಜಮೀನನ್ನು ಅಕ್ರಮವಾಗಿ ಪಡೆದುಕೊಳ್ಳಬೇಕೆಂಬ ಉದ್ದೇಶದಿಂದ ಸುಳ್ಳು ಪ್ರಕರಣವನ್ನು ದಾಖಲು ಮಾಡಿರುತ್ತೀರಿ ಎಂದರೆ ಸರಿಯಲ್ಲ. ನೀವು ಮತ್ತು ಪ್ರತಿವಾದಿಗಳು ತಮ್ಮ ಕುಟುಂಬಕ್ಕೆ ಸೇರಿದ ಆಸ್ತಿಗಳನ್ನು ವಿಭಾಗ ಮಾಡಿಕೊಂಡಿದ್ದರೂ ಕೂಡ ವಿಭಾಗ ಮಾಡಿಕೊಂಡಿಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ )

ಓ ಹೇ ಕೇ ಸ ಇ ಓ.

2 ನೇ ಅಪರ ಸಿವಿಲ್ ನ್ಯಾಯಾಧೀಶರು

ಸಾಕ್ಷಿ ಸಹಿ

ಮತ್ತು ಜೆ ಎಂ ಎಫ್ ಸಿ ಮದ್ದೂರು.